**Publication: Prajavani**
**Date: 16-7-2022 Page 03**

# ವಿದ್ಯಾರ್ಥಿಗಳ ಪ್ರಾಜೆಕ್ಟ್ ಪ್ರದರ್ಶನ



ಬೆಂಗಳೂರು: ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಜಿನಿಯರಿಂಗ್‌ನ ಮೂಲ ವಿಜ್ಞಾನ ಮತ್ತು ಮಾನವಿಕ ವಿಭಾಗದಿಂದ ಆಯೋಜಿಸಿದ್ದ ರಾಜ್ಯಮಟ್ಟದ ಪ್ರಾಜೆಕ್ಟ್‌ಗಳ ಪ್ರದರ್ಶನದಲ್ಲಿ ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ನೂತನ ಆವಿಷ್ಕಾರ ಪ್ರದರ್ಶಿಸಿದರು.

ಆ್ಯಂಡ್ರಾಯ್ಡ್ ಅಭಿವೃದ್ಧಿ, ಬ್ಲೂಟೂತ್, ಕೋಡಿಂಗ್, ಸಾರಿಗೆ, ವೈದ್ಯಕೀಯ ತಂತ್ರಜ್ಞಾನ ಸೇರಿದಂತೆ ಉಪಯುಕ್ತ ವಸ್ತುಗಳ ಮಾದರಿಯನ್ನು ಉದಯೋನ್ಮುಖ ಎಂಜಿನಿಯರ್‌ಗಳು ಪ್ರದರ್ಶಿಸಿದರು.

ವಿದ್ಯಾರ್ಥಿಗಳಾದ ಅಕ್ಷಿತಾ ಹಾಗೂ ದೇವೇಶ್ ಅವರು, ಕಣ್ಣಿಲ್ಲದವರು ಸುರಕ್ಷಿತವಾಗಿ ನಡೆಯಲು ಸಹಾಯವಾಗುವ ಸ್ಟಿಕ್ ಅನ್ನು ಪ್ರದರ್ಶಿಸಿದರು.

ಪ್ರಾಂಶುಪಾಲ ಡಾ.ಸಂಜಯ್ ಜೈನ್ ಮಾತನಾಡಿ, 'ಇಂತಹ ಪ್ರದರ್ಶನದಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಕೌಶಲ ಹೆಚ್ಚಿಸಲಿದೆ. ವಿದ್ಯಾರ್ಥಿಗಳು ಪರಸ್ಪರ ಹೊಸ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಅನುಕೂಲ ಆಗಲಿದೆ. ಸಂಶೋಧನಾ ಕೌಶಲ ಹೆಚ್ಚಿಸುತ್ತದೆ' ಎಂದು ಹೇಳಿದರು.